# ಶ್ರೀರಾಮಾನುಜರ ಜೀವನ ಮತ್ತು ಸಾಧನೆ – ೨

◆ ಸ್ವಾಮಿ ತಪಸ್ಯಾನಂದ

**(ಹಿಂದಿನ ಸಂಚಿಕೆಯಿಂದ ಮುಂದುವರೆದುದು)**

## ರಾಮಾನುಜರ ಸಂನ್ಯಾಸ ಸ್ವೀಕಾರ

ಯಾಮುನರ ಅಂತ್ಯಕ್ರಿಯೆಗಳು ಪೂರ್ಣವಾದೊಡನೆಯೇ ರಾಮಾನುಜರು ಗಂಭೀರ ಭಾವದೊಡನೆ ಕಾಂಚಿಗೆ ಹಿಂತಿರುಗಿದರು. ಅಲ್ಲಿ ಅವರು ತಮ್ಮ ಕುಟುಂಬದ ಕಡೆಗೆ ಎಳ್ಳಷ್ಟೂ ಗಮನವೀಯದೆ, ತಮ್ಮೆಲ್ಲ ಕಾಲವನ್ನೂ ವರದರಾಜಸ್ವಾಮಿಯ ಕೈಂಕರ್ಯದಲ್ಲಿಯೂ, ಭಕ್ತ ಕಾಂಚೀಪೂರ್ಣರ ಸತ್ಸಂಗದಲ್ಲಿಯೂ ಕಳೆಯಲಾರಂಭಿಸಿದರು. ಇದು ಅವರ ಮಡದಿ ರಕ್ಷಾಂಬಾಳ್‌ಗೆ ಅತೀವ ದುಃಖವನ್ನು ಉಂಟುಮಾಡಿತು. ರಾಮಾನುಜರು ಮಹಾತ್ಮರಲ್ಲಿ ಭಕ್ತಿಯಿಂದ ನಡೆದುಕೊಳ್ಳುವಾಗ ಜಾತಿರಿವಾಜುಗಳನ್ನು ಕಡೆಗಣಿಸುವುದನ್ನು ಆಕೆಗೆ ಸಹಿಸುವುದು ಸಾಧ್ಯವಾಗದೆ ಹೋಯಿತು.

ಕಾಂಚೀಪೂರ್ಣರನ್ನು ತಮ್ಮ ಆಧ್ಯಾತ್ಮಿಕ ಆಚಾರ್ಯರನ್ನಾಗಿ ಸ್ವೀಕರಿಸಬೇಕು ಎಂಬುದೇ ರಾಮಾನುಜರಿಗಿದ್ದ ಇಚ್ಛೆ. ಆದರೆ ಕಾಂಚೀಪೂರ್ಣರು ಬಹು ವಿನಯದಿಂದ ಈ ಕೋರಿಕೆಯನ್ನು ತಳ್ಳಿಹಾಕಿದರು. ರಾಮಾನುಜರು ಈ ವಿಚಾರದಲ್ಲಿ ಭಗವಾನ್ ವರದರಾಜಸ್ವಾಮಿಯ ಅಪ್ಪಣೆಯನ್ನು ಪಡೆಯುವಂತೆ ಕಾಂಚೀಪೂರ್ಣರಲ್ಲಿ ವಿನಂತಿಸಿದರು. ಮರುದಿನ ಕಾಂಚೀಪೂರ್ಣರು ಮಹಾತ್ಮರಾದ ಮಹಾಪೂರ್ಣರ ಬಳಿ ರಾಮಾನುಜರು ಮಂತ್ರದೀಕ್ಷೆಯನ್ನು ಪಡೆಯುವಂತೆ ತಿಳಿಸಬೇಕೆಂದು ಭಗವಂತನು ತಮಗೆ ಅಪ್ಪಣೆಯಿತ್ತಿದ್ದಾನೆ ಎಂದು ಅರುಹಿದರು. ಹರ್ಷಭರಿತರಾದ ರಾಮಾನುಜರು ತತ್‌ಕ್ಷಣವೇ ಆ ಮಹಾಮಹಿಮರನ್ನು ದರ್ಶಿಸಲು ಶ್ರೀರಂಗಕ್ಕೆ ತೆರಳಿದರು. ದಿವ್ಯ ಸಂಯೋಗವೋ ಎಂಬಂತೆ, ಅದೇ ಸಮಯದಲ್ಲಿ ಪವಿತ್ರ ಶ್ರೀರಂಗ ಕ್ಷೇತ್ರಕ್ಕೆ ಬರುವಂತೆ ರಾಮಾನುಜರ ಮನವೊಲಿಸಲು ಮಹಾಪೂರ್ಣರೂ ಕಾಂಚಿಗೆ ಹೊರಟಿದ್ದರು. ಯಾಮುನರು ದೈವಾಧೀನರಾಗಿ ಆಗಲೇ ಒಂದು ವರ್ಷ ಕಳೆದಿತ್ತು. ಅವರ ಭಕ್ತರಿಗೆ ಮತ್ತು ಶಿಷ್ಯರಿಗೆ ಆ ಸ್ಥಾನವನ್ನು ತುಂಬಲು ರಾಮಾನುಜರನ್ನು ಆಹ್ವಾನಿಸುವುದಲ್ಲದೆ ಬೇರೆ ದಾರಿ ತೋರಲಿಲ್ಲ. ಆದ್ದರಿಂದಲೇ, ಅವರು ಆ ಉದ್ದೇಶದಿಂದ ಮಹಾಪೂರ್ಣರನ್ನು ನಿಯಮಿಸಿ ಕಳಿಸಿದ್ದರು. ನಾಲ್ಕು ದಿನಗಳ ಪ್ರಯಾಣದ ನಂತರ ಮಹಾಪೂರ್ಣರು ರಾಮಾನುಜರನ್ನು ಮಧುರಾಂತಕದಲ್ಲಿರುವ ವಿಷ್ಣು ಮಂದಿರದ ಬಳಿ ಭೇಟಿಯಾದರು. ಇಬ್ಬರೂ ಆನಂದ ತುಂದಿಲರಾಗಿ ಭಗವಂತನಿಗೆ ಧನ್ಯವಾದ ಸಮರ್ಪಿಸಿದರು. ರಾಮಾನುಜರ ಒತ್ತಾಯದ ಕೋರಿಕೆಯಂತೆ ಮಹಾಪೂರ್ಣರು ವಿಷ್ಣುವಿನ ಶಂಖ ಮತ್ತು ಚಕ್ರಗಳ ಮುದ್ರೆಗಳನ್ನು ರಾಮಾನುಜರ ತೋಳುಗಳ ಮೇಲೆ ಒತ್ತಿ, ವೈಷ್ಣವ ಮಂತ್ರಪ್ರದಾನ ಮಾಡಿ ಅಧಿಕೃತವಾಗಿ ವೈಷ್ಣವ ಪಂಗಡಕ್ಕೆ ಸೇರಿಸಿಕೊಂಡರು. ಆರು ತಿಂಗಳುಗಳ ಕಾಲ ಅವರಿಬ್ಬರೂ ಕಾಂಚೀಪುರದಲ್ಲಿ ನೆಲಸಿದರು. ಆ ಕಾಲದಲ್ಲಿ ರಾಮಾನುಜರು 'ದಿವ್ಯಪ್ರಬಂಧಂ' ಎಂಬ ಹೆಸರಿನ ಪರಮ ಪವಿತ್ರವಾದ ನಾಲ್ಕು ಸಾವಿರ ತಮಿಳು ಪದ್ಯಗಳನ್ನು ಮಹಾಪೂರ್ಣರಿಂದ ಕಲಿತರು.

ಆದರೆ, ಅವರಿಬ್ಬರೂ ಒಂದು ವಿಚಿತ್ರ ಸನ್ನಿವೇಶದಿಂದಾಗಿ ಬೇರೆಯಾಗಬೇಕಾಯಿತು. ರಾಮಾನುಜರ ಪತ್ನಿ ರಕ್ಷಾಂಬಾಳ್ ಜಾತಿಪದ್ಧತಿಗಳಲ್ಲಿ ಬಹು ನಂಬಿಕೆಯನ್ನು ಇಟ್ಟಿದ್ದವಳಾಗಿದ್ದಳಷ್ಟೆ. ಮಹಾಪೂರ್ಣರ ಪತ್ನಿಯ ಕೊಡದ ಕೆಲವು ಹನಿ ನೀರು ತನ್ನ ಕೊಡದ ಮೇಲೆ ಚೆಲ್ಲಿದ್ದಕ್ಕಾಗಿ ಕಟು ಶಬ್ದಗಳಿಂದ ರಕ್ಷಾಂಬಾಳ್ ಅಪಮಾನ ಮಾಡಿದಳು. ಅದಷ್ಟೇ ಅಲ್ಲ, ರಾಮಾನುಜರನ್ನೂ ಹೀಗೆಂದು ನಿಂದಿಸಿದಳು: "ಇಂತಹ ಗಂಡನ ಕೈಯಲ್ಲಿ ಬಿದ್ದು, ನಾನು ನನ್ನ ಜಾತಿಯನ್ನು ಕಳೆದುಕೊಂಡೆ, ಎಲ್ಲವನ್ನೂ ಕಳೆದುಕೊಂಡೆ." ಈ ಘಟನೆಯ ಸಂಗತಿ ಮಹಾಪೂರ್ಣರ ಕಿವಿಗೆ ಬಿದ್ದಾಗ, ಅವರು ರಾಮಾನುಜರಿಗೂ ತಿಳಿಸದೆ, ಶ್ರೀರಂಗಕ್ಕೆ ಹೋಗಿಬಿಟ್ಟರು. ರಕ್ಷಾಂಬಾಳಿಂದ ತನ್ನ ಗುರುಪತ್ನಿಗೆ ಆದ ಅಪಮಾನವನ್ನೂ, ತೇಜೋವಧೆಯನ್ನೂ ಕಂಡು ಜರ್ಝರಿತ ಮನಸ್ಕರಾದ ರಾಮಾನುಜರು ಆಕೆಯ ಸಂಗಡ ಇನ್ನು ಮುಂದೆ ಗೃಹಸ್ಥ ಜೀವನ ನಡೆಸಲಾರೆನೆಂದು ನಿಶ್ಚಯಿಸಿದರು. ಅದಕ್ಕೊಂದು ಉಪಾಯವನ್ನು ಹೂಡಿದರು. ಅವಳ ತಂಗಿಯ ಮುಂಬರುವ ವಿವಾಹದ ಕೆಲಸಕಾರ್ಯಗಳಲ್ಲಿ ಅವಳ ತಂದೆಗೆ ಸಹಾಯ ಬೇಕಾಗಿದೆ ಎಂದು ಹೇಳಿ ಅವಳನ್ನು ತಂದೆಯ ಮನೆಗೆ ಕಳುಹಿಸಿಬಿಟ್ಟರು. ಆಕೆ ಸಂತೋಷದಿಂದ ತೆರಳಿದಳು. ರಾಮಾನುಜರು ಅವಳ ಅನುಪಸ್ಥಿತಿಯ ಪ್ರಯೋಜನ ಪಡೆದು ಪವಿತ್ರ ಸಂನ್ಯಾಸ ಸ್ವೀಕಾರ ವಿಧಿಗಳನ್ನು ಆಚರಿಸಿ, ಶ್ರೀವರದರಾಜ ಸ್ವಾಮಿಯೇ ತಮ್ಮ ಗುರುವೆಂದು ಭಾವಿಸಿದರು. ಕಾಂಚೀಪೂರ್ಣರ ಮೂಲಕ ಶ್ರೀಸ್ವಾಮಿಯೂ ರಾಮಾನುಜರಿಗೆ 'ಯತಿರಾಜ' ಎಂಬ ನಾಮಧೇಯವನ್ನು ಕರುಣಿಸಿದನು.

ಈ ಘಟನೆಯ ನಂತರ ರಾಮಾನುಜರು ಕೆಲಕಾಲ ಮಠವೊಂದರ ಅಧಿಪತಿಯಾಗಿದ್ದರು. ಅವರ ಸುತ್ತಲೂ ಬಹಳ ಶಿಷ್ಯರು ಕೂಡಿದರು. ಅವರಿಗೆಲ್ಲ ರಾಮಾನುಜರು ವೇದಾಂತ ಮತ್ತು ವೈಷ್ಣವ ಶಾಸ್ತ್ರದ ಬಗ್ಗೆ ಹಲವಾರು ಪ್ರವಚನಗಳನ್ನು ನೀಡಲಾರಂಭಿಸಿದರು. ಆ ಶಿಷ್ಯರ ಮಧ್ಯೆ ವಿಶಾಲವಾದ ಶಾಸ್ತ್ರಜ್ಞಾನವಿದ್ದ 'ಕೂರೇಶ' ಎಂಬ ಯುವಕನೂ ಇದ್ದ. ಅವನು

ಮುಂದೆ ರಾಮಾನುಜರ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುವುದನ್ನು ನಾವು ಕಾಣುತ್ತೇವೆ. ಆದರೆ ಅದಕ್ಕಿಂತಲೂ ಮಿಗಿಲಾದ ಪರಿವರ್ತನೆಯನ್ನು ನಾವು ಕಾಣುವುದು ಯಾದವ ಪ್ರಕಾಶರಲ್ಲಿಯೇ. ತಮ್ಮ ಹಿಂದಿನ ಕೆಟ್ಟ ಕೃತ್ಯಗಳಿಗಾಗಿ, ಪಶ್ಚಾತ್ತಾಪ ಪಡುತ್ತಿದ್ದ ಯಾದವಪ್ರಕಾಶರು ಅಪರಾಧಿ ಭಾವನೆ ಯಿಂದುಂಟಾದ ತೀವ್ರತಳಮಳದಿಂದ ತಮ್ಮ ದಿನಗಳನ್ನು ಕಳೆಯುತ್ತಿದ್ದರು. ಈ ಬಗೆಯ ಮನಸ್ಥಿತಿಯಲ್ಲಿಯೇ ಅವರು ಕಾಂಚೀಪೂರ್ಣರನ್ನು ಭೇಟಿಯಾದರು. ಕಾಂಚೀಪೂರ್ಣರು ಅವರಿಗೆ ರಾಮಾನುಜರ ದಿವ್ಯತೆಯ ಬಗ್ಗೆ ಅರಿವು ಮಾಡಿಕೊಟ್ಟು ಮನಸ್ಸಮಾಧಾನವನ್ನು ಪಡೆಯಲು, ಅವರ ಪಾದಗಳಲ್ಲಿಯೇ ಶರಣುಹೋಗಿರೆಂದು ಸಲಹೆಯಿತ್ತರು. ಅದರಂತೆಯೇ, ಯಾದವರು ತಮ್ಮ ಹಿಂದಿನ ಶಿಷ್ಯರ ಬಳಿ ಹೋಗಿ, ತಾವೇ ಅವರಲ್ಲಿ ಶಿಷ್ಯತ್ವ ಸ್ವೀಕಾರ ಮಾಡಿದರು. ಅವರಿಗೆ 'ಗೋವಿಂದ ಜೀಯರ್' ಎಂಬ ನೂತನ ನಾಮಧೇಯವನ್ನು ಕೊಡಲಾಯಿತು.

### ಶ್ರೀರಂಗಕ್ಕೆ ಆಗಮನ

ರಾಮಾನುಜರ ಸಂನ್ಯಾಸ ಸ್ವೀಕಾರದ ವರ್ತಮಾನವು ಶ್ರೀರಂಗಕ್ಕೆ ಮುಟ್ಟಿದಾಗ ಅಲ್ಲಿನ ವೈಷ್ಣವ ಭಕ್ತರೆಲ್ಲರೂ ಹರ್ಷಾನ್ವಿತರಾದರು. ಅವರೆಲ್ಲ ಶ್ರೀರಂಗಕ್ಕೆ ರಾಮಾನುಜರನ್ನು ಕರೆತರುವ ಪ್ರಶಸ್ತ ಕಾಲವು ಬಂದೊದಗಿದೆಯೆಂದು ಬಗೆದರು. ಶ್ರೀರಂಗನಾಥಸ್ವಾಮಿಯೇ ಆದೇಶ ನೀಡಲಾಗಿ, ಅವರು ಮತ್ತೆ ಆ ಉದ್ದೇಶಕ್ಕಾಗಿ ಮಹಾಪೂರ್ಣರನ್ನು ಕಳುಹಿಸಿದರು. ಕಾಂಚಿಗೆ ಬಂದ ಮಹಾಪೂರ್ಣರು ರಾಮಾನುಜರನ್ನು ಸೇವೆಯಿಂದ ಬಿಡುಗಡೆ ಮಾಡುವಂತೆ ಉತ್ಕಂಠತೆಯಿಂದ ಶ್ರೀವರದರಾಜ ಸ್ವಾಮಿಯನ್ನು ಬೇಡಿಕೊಂಡರು. ಸ್ವಾಮಿಯಾದರೋ, ಆ ಪ್ರಾರ್ಥನೆಯನ್ನು ಸ್ವೀಕರಿಸಿ ಅಂತರಂಗದಲ್ಲಿಯೇ ಶ್ರೀರಾಮಾನುಜರನ್ನು ಮಹಾಪೂರ್ಣರೊಡನೆ ಶ್ರೀರಂಗಕ್ಕೆ ತೆರಳುವಂತೆ ಪ್ರೇರೇಪಿಸಿದನು. ಶ್ರೀರಂಗವನ್ನು ತಲುಪಿದ ರಾಮಾನುಜರು ಮಹಾಪೂರ್ಣರ ಆಶ್ರಯ ಪಡೆದು, ಅನೇಕ ವೈಷ್ಣವ ಗ್ರಂಥಗಳ ಅಧ್ಯಯನವನ್ನು ಮಾಡಿದರು. ರಾಮಾನುಜರು ವೈಷ್ಣವ ಮತಕ್ಕೆ ಸೇರ್ಪಡೆಯಾಗಿದ್ದನ್ನು ಸುಸಂಪನ್ನಗೊಳಿಸಲು, ಮಹಾಪೂರ್ಣರು, ಅವರನ್ನು ಆಗಿನ ಕಾಲದ ಸರ್ವೋತ್ಕೃಷ್ಟ ವೈಷ್ಣವಾಚಾರ್ಯರಾದ ಗೋಷ್ಠೀಪೂರ್ಣರ ಬಳಿಗೆ ಅದ್ಭುತಶಕ್ತಿಯ ವೈಷ್ಣವ ಮಂತ್ರದೀಕ್ಷೆಯನ್ನು ಪಡೆಯಲು ಕಳುಹಿಸಿದರು. ರಾಮಾನುಜರು ಅದರಂತೆಯೇ ಗೋಷ್ಠೀಪೂರ್ಣರ ಬಳಿ ಹೋದಾಗ, ಅವರು ಮತ್ತೊಂದು ದಿನ ಬರುವಂತೆ ಹೇಳಿದರು. ಹೀಗೆ ಅವರ ಶ್ರದ್ಧೆಯನ್ನು ಪರೀಕ್ಷಿಸಲು ರಾಮಾನುಜರ ದೀಕ್ಷೆಯನ್ನು ಹದಿನೆಂಟು ಬಾರಿ ಮುಂದೂಡಿದರು. ಕಡೆಗೆ ಭಗವಂತನ ಆದೇಶದ ಮೇರೆಗೆ ಗೋಷ್ಠೀಪೂರ್ಣರು ರಾಮಾನುಜರಿಗೆ ಮಂತ್ರಪ್ರದಾನ ಮಾಡಿ ಅದನ್ನು ಬೇರೆ ಯಾರಿಗೂ ಹೇಳಬಾರದೆಂದು ವಿಶೇಷವಾಗಿ ಎಚ್ಚರಿಕೆಯನ್ನಿತ್ತರು. ಆ ಮಂತ್ರವು ಅದೆಷ್ಟು ಶಕ್ತಿಭರಿತವಾಗಿತ್ತೆಂದರೆ ಅದನ್ನು ಕೇಳಿದವರಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ ಎಂಬ ಪ್ರತೀತಿ ಹಬ್ಬಿತ್ತು.

ಅದ್ಭುತವೋ ಅದ್ಭುತ! ಗುರುಗಳ ಆಶ್ರಮವನ್ನು ತೊರೆದ ರಾಮಾನುಜರು ಮಾಡಿದ ಮೊದಲ ಕಾರ್ಯವೆಂದರೆ, ಸಮೀಪದ ದೇವಸ್ಥಾನದ ಗೋಪುರವನ್ನು ಹತ್ತಿ, ಸುತ್ತಲಿನ ಜನರನ್ನೆಲ್ಲ ಕೂಗಿ ಕರೆದು ಗಟ್ಟಿಯಾದ ಧ್ವನಿಯಲ್ಲಿ, ಆ ಮಂತ್ರವನ್ನು ಘೋಷಿಸಿ, ತಮ್ಮೊಡನೆ ಉಚ್ಚರಿಸುವಂತೆ ಹೇಳಿದ್ದು. ತಮ್ಮ ಆಜ್ಞೆಯ ಉಲ್ಲಂಘನೆಯ ಈ ವರ್ತಮಾನವು ಗೋಷ್ಠೀಪೂರ್ಣರಿಗೆ ತಿಳಿಯಿತು. ನಂತರ ರಾಮಾನುಜರು ಅವರಿಗೆ ಪ್ರಣಾಮಗಳನ್ನು ಸಲ್ಲಿಸಲು ಹೋದಾಗ ತಮ್ಮ ಆಜ್ಞೆಯ ಉಲ್ಲಂಘನೆಯಿಂದಾದ ಕ್ರೋಧದಿಂದ, ಕಣ್ಣುಗಳಿಂದ ಕಿಡಿ ಕಾರುತ್ತಾ ಗೋಷ್ಠೀಪೂರ್ಣರು ಅವರನ್ನು ಕಟುವಾಗಿ ತೆಗಳಿದರು. ಗುರುವಿನ ಪಾದಗಳನ್ನು ವಿನಯದಿಂದ ಬಿಗಿದಪ್ಪಿ ಹಿಡಿದುಕೊಂಡ ರಾಮಾನುಜರು ತಮ್ಮ ಈ ಕೃತ್ಯದಿಂದ ತಾವು ನರಕಕ್ಕೆ ನೂಕಲ್ಪಟ್ಟರೂ ಅದರಿಂದ ನೂರಾರು ಜನರ ಉದ್ಧಾರವಾಗುವುದಾದರೆ ಅದೇ ತಮ್ಮ ಭಾಗ್ಯ ಎಂದು ಬಿನ್ನವಿಸಿದರು. ರಾಮಾನುಜರ ಉದಾರ ಹೃದಯದ ಭಾವನೆ ಗೋಷ್ಠೀಪೂರ್ಣರ ಹೃದಯವನ್ನೂ ಪೂರ್ಣವಾಗಿ ತಟ್ಟಿತು. ಅವರು ಒಡನೆಯೇ ರಾಮಾನುಜರ ಪಾದಗಳಿಗೆರಗಿ **"ಇಂದಿನಿಂದ ರಾಮಾನುಜರೇ ನನ್ನ ಗುರು. ನಾನು ಅವರ ಗುರುವಲ್ಲ"** ಎಂದು ಘೋಷಿಸಿದರು.

ಈ ಬಗೆಯಲ್ಲಿ ವೈಷ್ಣವ ಮತದ ರಹಸ್ಯಗಳಲ್ಲಿ ಸಂಪೂರ್ಣ ದೀಕ್ಷೆಯನ್ನು ಹೊಂದಿದ ರಾಮಾನುಜರು ವೈಷ್ಣವ ಸಂಪ್ರದಾಯದ ಇತರ ವಿಭಾಗಗಳಲ್ಲಿ ತ್ವರಿತವಾದ ಆದರೆ ಪೂರ್ಣವಾದ ತರಬೇತಿಯನ್ನು ಗತಿಸಿದ ಯಾಮುನಾಚಾರ್ಯರ ಐವರು ಶಿಷ್ಯರುಗಳ ಮೂಲಕ ಪಡೆದರು. ಅವರುಗಳು ಕಾಂಚೀಪೂರ್ಣ, ಮಹಾಪೂರ್ಣ, ಗೋಷ್ಠೀಪೂರ್ಣ, ಮಾಲಾಧರ ಮತ್ತು ವರರಂಗ. ಇವರೆಲ್ಲರೂ ಯಾಮುನರ ಐದು ಅವಯವಗಳಂತೆಯೇ ಇದ್ದರು. ಅವರೆಲ್ಲರಿಂದ ತರಬೇತಿ ಹೊಂದಿದ ರಾಮಾನುಜರು ಯಾಮುನರ ಪ್ರತಿಕೃತಿಯೇ ಆಗಿಬಿಟ್ಟರು. ಈಗ ಅವರು ವೈಷ್ಣವ ನೇತಾರರಾಗುವ ಅರ್ಹತೆಯನ್ನು ಗಳಿಸಿಕೊಂಡಿದ್ದರು. ಒಂದು ದಿನ ಶ್ರೀರಂಗನಾಥಸ್ವಾಮಿಯೇ ಅವರಿಗೆ ಹೀಗೆಂದು ಅಪ್ಪಣೆ ಕೊಡಿಸಿದನು:

"ನಾವು ನಿನಗೆ ಐಹಿಕ ಮತ್ತು ಪಾರಮಾರ್ಥಿಕ ಲೋಕಗಳೆರಡರ ಸಂಪತ್ತನ್ನೂ ದಯಪಾಲಿಸಿದ್ದೇವೆ. ನೀನೀಗ ಉಭಯ ವಿಭೂತಿನಾಯಕನಾಗಿ ಮೆರೆಯುತ್ತಿರುವೆ. ಎಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿ, ನನ್ನ ಈ ನಿವಾಸದ ಕಾರ್ಯಭಾರಗಳನ್ನು ಸಂಬಾಳಿಸಿಕೊಂಡು ಹೋಗು." ಹೀಗೆ,

ರಾಮಾನುಜರು ಶ್ರೀರಂಗನಾಥನ ಬೃಹದ್ ದೇಗುಲದ ಅಧಿಕಾರವನ್ನು ಕೈಗೆತ್ತಿಕೊಂಡರು. ಒಡನೆಯೇ, ಖಜಾನೆಯೂ ಸೇರಿದಂತೆ, ದೇವಸ್ಥಾನದ ಎಲ್ಲಾ ವಿಭಾಗಗಳನ್ನೂ ತಪಾಸಣೆಗೆ ಒಳಪಡಿಸಿದರು. ಹಲವು ದುರ್ನಡತೆಯ ಅಧಿಕಾರಿಗಳನ್ನು ಹೊರಹಾಕಿ ಹೊಸಬರನ್ನು ನೇಮಿಸಿಕೊಂಡರು. ಈ ಬಗೆಯಲ್ಲಿ, ದೇವಮಂದಿರದ ಆಡಳಿತದಲ್ಲಿ ಸಂಪೂರ್ಣ ಪುನರ್ವ್ಯವಸ್ಥಾಪನೆಯನ್ನು ಮಾಡಿದರು. ಅವರ ಈ ಸುಧಾರಣೆಗಳನ್ನು ವಿರೋಧಿಸುವವರು ಇಲ್ಲದಿರಲಿಲ್ಲ. ದೇವಸ್ಥಾನದ ಮುಖ್ಯ ಅರ್ಚಕನೇ, ತನ್ನ ಗಳಿಕೆಗೆ ಮತ್ತು ಅಧಿಕಾರಕ್ಕೆ ಇವುಗಳಿಂದ ಸಂಚಕಾರ ಬರುತ್ತದೆ ಎಂದು ಸುಧಾರಣೆಗಳನ್ನು ವಿರೋಧಿಸಿದನು. ರಾಮಾನುಜರನ್ನು ಮುಗಿಸಿಯೇಬಿಡಬೇಕೆಂದು ವಿಷಪ್ರಯೋಗವನ್ನೂ ಕೈಗೊಂಡನು. ಆದರೆ, ಈ ಸಂಚು, ಭಗವತ್ ಕೃಪೆಯಿಂದ ಸಫಲವಾಗಲಿಲ್ಲ. ರಾಮಾನುಜರು ಹಿಂಜರಿಯದೆ, ದೇಗುಲದ ಆಡಳಿತ ಯಂತ್ರವನ್ನು ಚುರುಕುಗೊಳಿಸಿದರು. ಎಲ್ಲರೂ, ಅದರಲ್ಲೂ ದೇವಸ್ಥಾನದ ಕಾರ್ಯಕರ್ತರುಗಳು, ಅವರ ನೂತನ ವಿಧಾನಗಳನ್ನು ಪ್ರಶಂಸಿಸಿದರು.

### ರಾಮಾನುಜರ ಶ್ರೀರಂಗ ಪ್ರಸ್ಥಾನದ ಮಹತ್ವ

ರಾಮಾನುಜರು ಶ್ರೀರಂಗಕ್ಕೆ ಹೋಗಿ ನೆಲೆಸಿದ್ದು ಅವರ ಜೀವನದ ಒಂದು ಮುಖ್ಯ ಹಂತವಾಗಿದೆ. ರಾಮಾನುಜರ ವೈದಿಕ ವಿದ್ವತ್ತು ಮತ್ತು ಆಳ್ವಾರರ ವೈಷ್ಣವ ತತ್ವಗಳು ಸಾಮರಸ್ಯಗೊಂಡ ಬಗೆಯನ್ನು ಇದು ಸೂಚಿಸುತ್ತದೆ. ಆಳ್ವಾರರು (ದಿವ್ಯಪ್ರೇಮದಲ್ಲಿ ಮುಳುಗಿದವರು) ಎಂಬ ಹನ್ನೆರಡು ಭಕ್ತ ಶಿರೋಮಣಿಗಳು, ದಿವ್ಯೋನ್ಮಾದದಿಂದ ಶ್ರೀಕೃಷ್ಣನ ಮೇಲಿನ ಪರಮ ಪ್ರೇಮದಿಂದ ಹಾಡಿದ ಗೀತೆಗಳಲ್ಲಿಯೇ ಮತ್ತು ಅವರ ಆದರ್ಶ ಜೀವನದಲ್ಲಿಯೇ ದಕ್ಷಿಣ ಭಾರತದ ವೈಷ್ಣವ ಸಂಪ್ರದಾಯದ ಆಕರವು ಇದೆ. ಆಧುನಿಕ ವಿದ್ವಾಂಸರ ಪ್ರಕಾರ, ಅವರುಗಳ ಜೀವಿತಕಾಲ ಕ್ರಿ.ಶ. ಎರಡನೆಯ ಶತಮಾನದಿಂದ ಕ್ರಿ.ಶ. ಎಂಟನೆಯ ಶತಮಾನದವರೆಗೆ ಹಬ್ಬಿತ್ತು. ಆದರೆ ಪುರಾತನ ಸಂಪ್ರದಾಯವು ಅವರು ಕ್ರಿ.ಪೂ. ೪೩೦೦ಕ್ಕಿಂತಲೂ ಹಿಂದೆ ಇದ್ದರು ಎಂದು ಹೇಳುವುದು. ಅವರ ಜೀವನ ಮತ್ತು ಕೃತಿಗಳು ಪರಮಾತ್ಮನ ಮೇಲಿನ ಪವಿತ್ರ ಭಕ್ತಿಯ ಎಲ್ಲಾ ಪ್ರಕಾರಗಳನ್ನೂ ಒಳಗೊಂಡಿವೆ. ಇವುಗಳೇ ಬಹಳ ಸಮಯದ ನಂತರ ಶ್ರೀಚೈತನ್ಯ ಸಂಪ್ರದಾಯದ ಮೂಲಕ ಪ್ರತಿನಿಧಿಸಲ್ಪಟ್ಟವು. ದಾಸ್ಯ, ಅಪತ್ಯ (ಪುತ್ರಭಾವ), ಸಖ್ಯ (ಸ್ನೇಹಭಾವ), ವಾತ್ಸಲ್ಯ (ಮಗುವಿನ ಮೇಲೆ ತಾಯಿಗಿರುವ ಒಲವಿನ ಭಾವ) ಮತ್ತು ಮಧುರ (ಪ್ರೇಯಸೀ ಭಾವ) – ಈ ಭಾವಗಳೇ ಆ ಪ್ರಕಾರಗಳು. ಈ ಆಳ್ವಾರುಗಳ ಮಧ್ಯೆ ಕೆಲವರು ಮಹಾನ್ ಕ್ರಿಯಾಶೀಲರೂ ಆಗಿದ್ದರು ಎನ್ನುವುದು ಗಮನವಿಡಬೇಕಾದ ವಿಷಯ. ಅವರಲ್ಲಿ ಒಬ್ಬರಾದ ತಿರುಮಂಗೈ ಆಳ್ವಾರರು ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನವನ್ನು ನವೀಕರಿಸಿ, ಅದನ್ನು ಇಂದಿನ ಬೃಹದಾಕಾರಕ್ಕೆ ತಂದರು. ಈ ಆಳ್ವಾರುಗಳ ಕೊಡುಗೆಯನ್ನು ಗಮನಕ್ಕೆ ತಂದುಕೊಂಡೋ ಏನೋ, ಭಾಗವತ ಮಾಹಾತ್ಮ್ಯವು ದ್ರಾವಿಡ ದೇಶವನ್ನು 'ಭಕ್ತಿಯ ತವರು ಮನೆ' ಎಂದು ಕರೆದಿದೆ. ಭಾಗವತ ಪುರಾಣದಲ್ಲಿಯೂ, ನಾರಾಯಣನ ಮಹಾಭಕ್ತರು ಪುಣ್ಯನದಿಗಳಾದ ತಾಮ್ರಪರ್ಣಿ, ಪಯಸ್ವಿನೀ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ಮಹಾನದಿಗಳು ನೀರುಣಿಸುವ ಮತ್ತು ಪಾವನಗೊಳಿಸಿದ ದೇಶದಲ್ಲಿ ಹುಟ್ಟುವರು ಎಂದು ಹೇಳುತ್ತದೆ.

ಅನಂತರದ ದಿನಗಳಲ್ಲಿ ಆಳ್ವಾರರುಗಳ ಭಕ್ತಿಗೀತೆಗಳಿಂದ ಸ್ಫೂರ್ತಿಯನ್ನು ಪಡೆದ ವ್ಯಕ್ತಿಗಳ ಸಣ್ಣ ಗುಂಪೊಂದು ನಾಥಮುನಿ ಎಂಬ ವಿದ್ವಾಂಸರಾದ ಮಹಾಭಕ್ತರೊಬ್ಬರನ್ನು ತಮ್ಮ ಆಚಾರ್ಯರನ್ನಾಗಿಸಿಕೊಂಡರು. ಅವರು ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ, ಯೋಗಶಾಸ್ತ್ರದಲ್ಲಿ ಮತ್ತು ಆಳ್ವಾರರ ವೈಷ್ಣವ ಸಂಪ್ರದಾಯಗಳಲ್ಲಿ ಅಗಾಧ ಪರಿಣತಿಯನ್ನು ಪಡೆದಿದ್ದರು. ಅವರು ಆಳ್ವಾರರ ಭಕ್ತಿಗೀತೆಗಳನ್ನು ಸಂಗ್ರಹಿಸಿ ಮತ್ತು ಸಂಪಾದಿಸಿ ನಾಲ್ಕು ಸಾವಿರ ಪದ್ಯಗಳ ಮಹಾಗ್ರಂಥವೊಂದನ್ನು ಪ್ರಕಾಶಿಸಿದರು. ಅದು 'ತಮಿಳು ವೇದ' ಎಂದು ಪರಿಗಣಿತವಾಗಿದೆ. ಅವರು ಆ ಗೀತೆಗಳ ಗಾಯನವನ್ನು ಶ್ರೀರಂಗದ ದೇಗುಲದಲ್ಲಿಯೂ, ಇತರೆಡೆಗಳಲ್ಲಿಯೂ ಏರ್ಪಾಡು ಮಾಡಿದರು.

ವೈಷ್ಣವ ಸಮುದಾಯದ ಸಂಘಟನೆಯನ್ನು ದೃಢವಾಗಿ ಕೈಗೊಂಡವರು ನಾಥಮುನಿಯ ಮೊಮ್ಮಕ್ಕಳಾಗಿ ಹುಟ್ಟಿದ ಯಾಮುನಾಚಾರ್ಯರು. ಅವರು ವೈದಿಕ ವಾಙ್ಮಯದಲ್ಲಿ ಮತ್ತು ತಮಿಳು ವೈಷ್ಣವ ಸಂಪ್ರದಾಯದಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ರಾಜಮನೆತನವೊಂದಕ್ಕೆ ದತ್ತಕ ಕೊಡಲ್ಪಟ್ಟ ಅವರು ತಮ್ಮ ಯೌವನದ ದಿನಗಳನ್ನು ವೈಭವದಿಂದ ಕಳೆದರು. ಆದರೆ ಶೀಘ್ರವೇ ಅವರಲ್ಲಿ ಪರಿವರ್ತನೆಯಾಗಿ ಅವರು ತಪಸ್ವಿಯ ಜೀವನವನ್ನು ಕೈಗೊಂಡು, ಸಣ್ಣ ಮಠವೊಂದರಲ್ಲಿ ನೆಲೆಸಿದರು. ಅವರು ವೈಷ್ಣವ ಸಮುದಾಯವನ್ನು ಸಂಘಟಿಸುವುದರಲ್ಲಿ ಯಶಸ್ವಿಯಾದದ್ದಷ್ಟೇ ಅಲ್ಲ, ಶ್ರೀರಂಗಕ್ಷೇತ್ರವನ್ನು ಅದರ ಕೇಂದ್ರ ಸ್ಥಾನವನ್ನಾಗಿಯೂ ಮಾಡಿದರು. ಅವರ ಮಹತ್ವಾಕಾಂಕ್ಷೆಯೆಂದರೆ, ಭಾವನಾತ್ಮಕವಾದ ಆಳ್ವಾರುಗಳ ಧರ್ಮವನ್ನೂ ಮತ್ತು ಶ್ರೀಶಂಕರಾಚಾರ್ಯರ ಉಗಮ ಮತ್ತು ಅವರ ವೇದಾಂತ ದರ್ಶನಗಳ ಮೇಲಿನ ಭಾಷ್ಯಗಳ ರಚನೆಯ ಅನಂತರದ ತಾತ್ತ್ವಿಕ ಜಿಜ್ಞಾಸೆಯ ವೇದಾಂತ ಪ್ರಕ್ರಿಯೆಯನ್ನೂ ಸಾಮರಸ್ಯಗೊಳಿಸುವುದು. ಅವರು ತಮ್ಮ ಜೀವಿತಾವಧಿಯಲ್ಲಿಯೇ ಈ ಮಹತ್ಕಾರ್ಯವನ್ನು ಮುಕ್ತಾಯಗೊಳಿಸಲು ಸಾಧ್ಯವಾಗಲಿಲ್ಲ. ಆದರೆ, ಅವರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ರಾಮಾನುಜರ ಸಂಪರ್ಕಕ್ಕೆ ಬಂದು, ಅವರಲ್ಲಿ ತಾವು ಬಯಸಿದ ಮಹತ್ಕಾರ್ಯವನ್ನು ಪೂರ್ಣಗೊಳಿಸಬಲ್ಲ ವೈದಿಕ ವಿದ್ವತ್ ವರೇಣ್ಯರನ್ನು ಗುರುತಿಸಿದರು. ರಾಮಾನುಜರು

ಯಾದವಪ್ರಕಾಶರ ಶಿಷ್ಯತ್ವದಿಂದ ಹೇಗೆ ನಿಧಾನವಾಗಿ ಬಿಡಿಸಿಕೊಂಡು ವೈಷ್ಣವ ಸಮುದಾಯವನ್ನು ಸೇರಿದರು, ಹೇಗೆ ಮುಂದೆ ಅವರು ಶ್ರೀರಂಗಕ್ಕೆ ಕರೆತರಲ್ಪಟ್ಟರು ಮತ್ತು ಹೇಗೆ ಅವರು ಯಾಮುನರ ಶಿಷ್ಯೋತ್ತಮರಿಂದ 'ತಮಿಳು ವೇದ'ದ ಶಿಕ್ಷಣವನ್ನು ಪಡೆದು ತಮ್ಮ ಜೀವನದ ಧ್ಯೇಯವನ್ನು ತಲುಪಲು ಸಿದ್ಧರಾದರು ಎಂಬುವನ್ನು, ಈಗಾಗಲೇ ವಿವರಿಸಲಾಗಿದೆ.

### ಶ್ರೀರಂಗದಲ್ಲಿನ ಜೀವನ

ರಾಮಾನುಜರು ತಮ್ಮ ಸುದೀರ್ಘ ಜೀವನಾವಧಿಯನ್ನು, ಎರಡು ಕಾಲಾವಧಿಗಳನ್ನು ಬಿಟ್ಟರೆ, ಬಹುತೇಕ ಶ್ರೀರಂಗದಲ್ಲಿಯೇ ಕಳೆದರು. ಆ ಎರಡು ಅನುಪಸ್ಥಿತಿಯ ಅವಧಿಗಳ ಬಗ್ಗೆ ಮುಂದೆ ವಿಚಾರ ಮಾಡೋಣ. ಅವರು ತಮ್ಮ ಮಾತುಗಳನ್ನು ಕೇಳಲು ನೆರೆದ ಭಕ್ತರು ಮತ್ತು ಶಿಷ್ಯರಿಗೆ ನಮ್ಮಾಳ್ವಾರರ ಒಂದು ಸಾವಿರ ಪದ್ಯಗಳ ತಮಿಳು ಪ್ರಬಂಧಗಳ ಬಗ್ಗೆ ಪ್ರವಚನ ಮಾಡುವುದರಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಆ ಪ್ರವಚನಗಳ ಮಧ್ಯೆ ಒಂದರಲ್ಲಿ ಅವರು ಆಳ್ವಾರರು ಶ್ರೀಶೈಲ (ತಿರುಪತಿ)ದ ವೈಭವ ಮತ್ತು ಪಾವಿತ್ರ್ಯಗಳಿಗೆ ಮಹತ್ವಕೊಟ್ಟಿರುವುದನ್ನು ತೋರಿಸಿಕೊಟ್ಟರು. ನಮ್ಮಾಳ್ವಾರರ ಸ್ತೋತ್ರಗಳಲ್ಲಿ ಅದನ್ನು ವೈಕುಂಠವೆಂದೇ ಬಣ್ಣಿಸಲಾಗಿದೆ. ಅವರ ಶಿಷ್ಯರಾದ ಅನಂತಾಚಾರ್ಯರೆಂಬುವರು ಅಲ್ಲಿಗೆ ಸ್ವತಃ ಹೋಗಿ, ಆ ಪವಿತ್ರ ಕ್ಷೇತ್ರವನ್ನು ಅಭಿವೃದ್ಧಿಗೆ ತಂದರು. ಹಲವಾರು ಗೃಹಸ್ಥ ಮತ್ತು ಸಂನ್ಯಾಸಿ ಶಿಷ್ಯರು ರಾಮಾನುಜರ ಸುತ್ತಲೂ ನೆರೆದರು. ಅವರಲ್ಲಿ ಒಬ್ಬ ಸುವಿಖ್ಯಾತ ಅದ್ವೈತ ವಿದ್ವಾಂಸನಾದ 'ಯಜ್ಞಮೂರ್ತಿ' ಉತ್ತರ ಭಾರತದಲ್ಲೆಲ್ಲ ಸಂಚರಿಸಿ ವಾಗ್ವಿವಾದದಲ್ಲಿ ಪಂಡಿತರಿಗೆ ಸವಾಲೆಸಗಿ ಪರಾಜಯಗೊಳಿಸಿದ್ದನು. ತನ್ನ ಸಿದ್ಧಾಂತಕ್ಕೆ ವಿರೋಧವಾದ ಪಂಗಡದ ನಾಯಕರು ರಾಮಾನುಜರು ಎಂದು ಕೇಳಿ, ಅವನು ಶ್ರೀರಂಗಕ್ಕೆ ಬಂದು ಅವರೊಡನೆ ವೇದಾಂತ ಜಿಜ್ಞಾಸೆಗೆ ಇಳಿದನು. ಹದಿನೇಳು ದಿನಗಳ ಕಾಲ ಮಾಯಾವಾದ ಮತ್ತು ರಾಮಾನುಜರ ವೇದಾಂತ ವಿವರಣೆಗಳ ನಡುವೆ ವಾಗ್ವಿವಾದ ನಡೆಯಿತು. ಕಡೆಗೆ ಯಜ್ಞಮೂರ್ತಿಯು ಸೋಲೊಪ್ಪಿಕೊಂಡು, ವೈಷ್ಣವನಾಗಿ ಪರಿವರ್ತನೆ ಹೊಂದಿ, ರಾಮಾನುಜರ ಶಿಷ್ಯನಾದನು. ರಾಮಾನುಜರು ಅವನನ್ನು ಮಾನವ ಸಮುದಾಯಕ್ಕೆ ಉಪಕಾರಕವಾದ ಭಕ್ತಿತತ್ತ್ವದ ಮೇಲಿನ ಗ್ರಂಥಗಳನ್ನು ರಚಿಸಲು ನಿಯೋಜಿಸಿದರು. ಹೀಗೆ ಅವರು ಪ್ರತಿರೋಧಿ ಚಿಂತಕರನ್ನು ವಾದದಲ್ಲಿ ಗೆಲ್ಲುವುದರಲ್ಲಿಯೂ, ವೈಷ್ಣವರನ್ನು ತೀವ್ರವಾದ ತ್ಯಾಗ ಮತ್ತು ಭಕ್ತಿಪೂರಿತ ಬಾಳುವೆಯನ್ನು ಬಾಳುವಂತೆ ಪ್ರೋತ್ಸಾಹಿಸುವುದರಲ್ಲಿಯೂ ದಿನಗಳನ್ನು ಕಳೆದರು. ಶ್ರೀರಂಗದಲ್ಲಿರುವ ಅವರ ಮಠದಲ್ಲಿ ವಿದ್ಯಾವಂತರೂ ಮತ್ತು ಸರ್ವತ್ಯಾಗಿಗಳೂ ಆದ ಎಪ್ಪತ್ತನಾಲ್ಕು ಶಿಷ್ಯರು ವಾಸವಾಗಿದ್ದರು.

(ಮುಂದುವರೆಯುವುದು)

## ನೈಜಧರ್ಮ

ಜನರಿಗೆ ಧರ್ಮವನ್ನು ಕುರಿತು ಉಪದೇಶಮಾಡುವ ಬೋಧಕರು ಬೇಕಾದಷ್ಟು ಜನರಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಿವೇಚನಾಶಕ್ತಿಯನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಧರ್ಮದ ವಿಜ್ಞಾನವನ್ನು ತಿಳಿದುಕೊಂಡಾಗ ಮಾತ್ರ ಹೇಗೆ ವಿವೇಚಿಸಬೇಕೆಂಬುದು ನಿಮಗೆ ತಿಳಿಯುತ್ತದೆ. ಇದು ಆಹಾರದ ಹಾಗೆಯೇ; ಪೋಷಕವಿಜ್ಞಾನವನ್ನು ತಿಳಿದುಕೊಂಡಾಗ ಆಹಾರವು ಶುದ್ಧವಾಗಿದೆಯೆ, ಆರೋಗ್ಯಕರವಾಗಿದೆಯೆ, ಪುಷ್ಟಿಕರವಾಗಿದೆಯೆ ಎಂದು ವಿವೇಚಿಸಿ ನೋಡಲು ನಿಮಗೆ ಸಾಧ್ಯವಾಗುತ್ತದೆ. ಹಾಗೆಯೇ ಆಧ್ಯಾತ್ಮಿಕ ಆಹಾರದಲ್ಲೂ ಅದು ನಿರ್ಮಲವಾಗಿದೆಯೆ, ಶುದ್ಧವಾಗಿದೆಯೆ, ಪುಷ್ಟಿದಾಯಕವಾಗಿದೆಯೆ ಎಂದು ನೀವು ವಿವೇಚಿಸಿ ನೋಡಬೇಕು. ಆಹಾರದ ಮಾರುಕಟ್ಟೆಯಲ್ಲಿ ಹೇಗೋ ಧರ್ಮದ ಮಾರುಕಟ್ಟೆಯಲ್ಲಿಯೂ, ಒಳ್ಳೆಯ, ಅಷ್ಟು ಒಳ್ಳೆಯದಲ್ಲದ, ಕೆಟ್ಟದಾದ ವಸ್ತುಗಳ ಬೆರಕೆಯನ್ನು ನೋಡುವಿರಿ. ಆದ್ದರಿಂದಲೇ ವಿವೇಚನೆಯಿರಬೇಕು ಎನ್ನುವುದು. ನೀವು ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು— ಇದು ಆರೋಗ್ಯಕರವಾಗಿದೆಯೇ? ಆಧ್ಯಾತ್ಮಿಕ ಬೆಳವಣಿಗೆಗೆ ಹಿತಕರವಾಗಿದೆಯೆ? ಸಂತೋಷಕರವಾದ ಅಂತರಮಾನವೀಯ ಸಂಬಂಧಗಳಿಗೆ ಅನುಕೂಲಕರವಾಗಿದೆಯೆ? ಜನರು ಅನೇಕ ವೇಳೆ ವಿವೇಚಿಸುವುದರಲ್ಲಿ ವಿಫಲರಾಗಿ, ಧರ್ಮದಲ್ಲಿ ಹೊಸದಾಗಿ ಆಕರ್ಷಕವಾಗಿ ಕಂಡುದಕ್ಕೆ ಧುಮುಕುತ್ತಾರೆ. ಏಕೆಂದರೆ ಧರ್ಮದ ವಿಜ್ಞಾನವೆಂದರೇನೆಂಬುದು ಅವರಿಗೆ ತಿಳಿದಿರುವುದಿಲ್ಲ; ಅವರಿಗೆ ತಿಳಿದುಕೊಳ್ಳಲು ತಾಳ್ಮೆಯಿಲ್ಲ. ಅವರಿಗೆ ಧರ್ಮ ಅಗ್ಗದ ಬೆಲೆಗೆ ಬೇಕು, ಕ್ಯಾಪ್ಸೂಲ್‌ನಂತೆ ಅಡಕವಾಗಿರಬೇಕು. ಆದರೆ ಧರ್ಮಕ್ಕೆ ಬುದ್ಧಿಪೂರ್ವಕ ಪರಿಶ್ರಮವೂ ಹೋರಾಟವೂ ಅಗತ್ಯ. ವೈಜ್ಞಾನಿಕ ಸತ್ಯಗಳನ್ನು ಕಂಡುಹಿಡಿಯಲು ನಾವು ಪ್ರಕೃತಿಯ ಬಾಗಿಲು ತಟ್ಟುವಂತೆಯೇ ಆಧ್ಯಾತ್ಮಿಕ ಕ್ಷೇತ್ರದ ವೈಜ್ಞಾನಿಕ ಸತ್ಯಗಳನ್ನು ಕಂಡುಹಿಡಿಯಲು ನಮ್ಮ ಒಳಪ್ರಕೃತಿಯ ಬಾಗಿಲನ್ನು ತಟ್ಟಬೇಕು.

– ಸ್ವಾಮಿ ರಂಗನಾಥಾನಂದ